# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 548 |
| 2. | ವಿಧಾನಪರಿಷತ್ತು ಸದಸ್ಯರ ಹೆಸರು | : | ಶ್ರೀ. ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3. | ಉತ್ತರಿಸಬೇಕಾದ ದಿನಾಂಕ | : | 20.02.2023 |
| 4. | ಉತ್ತರಿಸಬೇಕಾದ ಸಚಿವರು | : | ಮಾನ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಹಾಗೂ ಪ್ರವಾಸೋದ್ಯಮ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದಲ್ಲಿ ಜೀವವೈವಿಧ್ಯ ಸಮಿತಿಗಳನ್ನು ರಚಿಸಲಾಗಿದೆಯೇ; ಸೃಜಿಸಲಾದ ಜೀವ ವೈವಿಧ್ಯ ಸಮಿತಿಗಳ ಸಂಖ್ಯೆ ಎಷ್ಟು; ಜೀವ ವೈವಿಧ್ಯ ಕುರಿತು ಮಾಹಿತಿಯಿರುವ ಸ್ಥಳೀಯ ಪಾರಂಪರಿಕ ವ್ಯಕ್ತಿಗಳನ್ನು ಸಮಿತಿಗೆ ಸದಸ್ಯರನ್ನಾಗಿ ಮಾಡಲಾಗಿದೆಯೇ; ಸಮಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸದಸ್ಯರ ಸಂಖ್ಯೆ ಎಷ್ಟು; (ವಿವರ ನೀಡುವುದು) | ಹೌದು.<br><br>ರಾಜ್ಯದಲ್ಲಿ ಒಟ್ಟು 6554 ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸಲಾಗಿದೆ. ವಿವರ ಕೆಳಕಂಡಂತಿದೆ.<br><br>ಜಿಲ್ಲಾ ಪಂಚಾಯಿತಿ — 30<br>ತಾಲ್ಲೂಕು ಪಂಚಾಯಿತಿ — 226<br>ಗ್ರಾಮ ಪಂಚಾಯಿತಿ — 6012<br>ನಗರ ಸ್ಥಳೀಯ ಸಂಸ್ಥೆಗಳು — 286<br>**ಒಟ್ಟು — 6554**<br><br>ಜೀವ ವೈವಿಧ್ಯ ಕುರಿತು ಮಾಹಿತಿಯಿರುವ ಸ್ಥಳೀಯ ಪಾರಂಪರಿಕ ವ್ಯಕ್ತಿಗಳನ್ನು ಈ ಸಮಿತಿಗಳಿಗೆ ಸದಸ್ಯರನ್ನಾಗಿ ಮಾಡಲಾಗಿದೆ.<br><br>ಪ್ರತಿ ಜೀವವೈವಿಧ್ಯ ನಿರ್ವಹಣಾ ಸಮಿತಿಯಲ್ಲಿ 07 ಸದಸ್ಯರಿರುತ್ತಾರೆ. ವಿವರಗಳು ಈ ಕೆಳಕಂಡಂತಿವೆ.<br><br>**ವಿವರ — ಸಂಖ್ಯೆ**<br>ಅಧ್ಯಕ್ಷರು — 1<br>ಮಹಿಳಾ ಸದಸ್ಯರು — 2<br>ಪ.ಜಾತಿ /ಪ.ಪಂ ಸದಸ್ಯರು — 1<br>ಸಾಮಾನ್ಯ ಸದಸ್ಯರು — 2<br>ಕಾರ್ಯದರ್ಶಿಗಳು — 1 |
| ಆ) | ಜೀವ ವೈವಿಧ್ಯ ಸಮಿತಿಗಳ ಸದಸ್ಯರಿಗೆ ಸರ್ಕಾರದ ಮೂಲಕ ತರಬೇತಿ ನೀಡಲಾಗಿದೆಯೇ; ಈವರೆಗೆ ಎಷ್ಟು ತರಬೇತಿ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿದೆ; ಇದಕ್ಕಾಗಿ ಕಳೆದ 3 ವರ್ಷಗಳಲ್ಲಿ ವೆಚ್ಚ ಮಾಡಲಾದ ಮೊತ್ತವೆಷ್ಟು; (ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು) | ಹೌದು, ತರಬೇತಿಯನ್ನು ನೀಡಲಾಗಿದೆ.<br><br>ಇದುವರೆಗೆ ಒಟ್ಟು 1105 ತರಬೇತಿಗಳನ್ನು ಹಮ್ಮಿಕೊಳ್ಳಲಾಗಿದೆ.<br><br>ಕಳೆದ ಮೂರು ವರ್ಷಗಳ ಅವಧಿಯಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ತರಬೇತಿಗಾಗಿ ರೂ. 60,53,535/-ಗಳನ್ನು ಮಂಡಳಿಯಿಂದ ವೆಚ್ಚ ಮಾಡಲಾಗಿರುತ್ತದೆ. ವಿವರಗಳು ಕೆಳಕಂಡಂತಿವೆ.<br><br>**ವರ್ಷ — ಮಾಡಲಾದ ವೆಚ್ಚ ರೂ.ಗಳಲ್ಲಿ**<br>2019–20 — 60,11,060/-<br>2020–21 — 42,475/-<br>2021–22 — – |

<table>
<tr>
<td>ಇ)</td>
<td>ಜೀವ ವೈವಿಧ್ಯ ದಾಖಲಾತಿ ನಿರ್ವಹಿಸಲು ಹಾಗೂ ಇತರೆ ಚಟುವಟಿಕೆಗಳಿಗಾಗಿ ಜೀವ ವೈವಿಧ್ಯ ಸಮಿತಿಗೆ ಬಿಡುಗಡೆ ಮಾಡಲಾದ ಮೊತ್ತವೆಷ್ಟು: ಈವರೆಗೆ ರಾಜ್ಯದಲ್ಲಿ ದಾಖಲಿಸಲಾದ ಜೀವ ವೈವಿಧ್ಯ ದಾಖಲಾತಿಗಳ ಸಂಖ್ಯೆ ಎಷ್ಟು ಕ್ರೋಡೀಕೃತ ವರದಿ ಇದೆಯೇ: (ವಿವರ ನೀಡುವುದು)</td>
<td>ಇದುವರೆಗೆ ರೂ. 18,63,44,421/-ಗಳನ್ನು ಬಿಡುಗಡೆ ಮಾಡಲಾಗಿದೆ.<br><br>ಈವರೆಗೆ 6554 ಜನತಾ ಜೀವವೈವಿಧ್ಯ ದಾಖಲಾತಿಗಳನ್ನು ತಯಾರಿಸಿದ ವಿವರ ಕೆಳಕಂಡಂತಿದೆ.<br>
<table>
<tr><td>ಜಿಲ್ಲಾ ಪಂಚಾಯಿತಿ</td><td>30</td></tr>
<tr><td>ತಾಲ್ಲೂಕು ಪಂಚಾಯಿತಿ</td><td>226</td></tr>
<tr><td>ಗ್ರಾಮ ಪಂಚಾಯಿತಿ</td><td>6012</td></tr>
<tr><td>ನಗರ ಸ್ಥಳೀಯ ಸಂಸ್ಥೆಗಳು</td><td>286</td></tr>
<tr><td>ಒಟ್ಟು</td><td>6554</td></tr>
</table>
</td>
</tr>
<tr>
<td>ಈ)</td>
<td>ಗ್ರಾಮ ಮಟ್ಟದಲ್ಲಿ ರಚನೆಯಾಗಿರುವ ಜೀವ ವೈವಿಧ್ಯ ಸಮಿತಿಗಳ ಮೇಲುಸ್ತುವಾರಿ ಮಾಡಲು ಸರ್ಕಾರದಿಂದ ಅಧಿಕೃತಗೊಳಿಸಿರುವ ಅಧಿಕಾರಿ ಯಾರು ಕಳೆದ 3 ವರ್ಷಗಳಲ್ಲಿ ಸಮಿತಿಯ ಕಾರ್ಯನಿರ್ವಹಣೆಯಲ್ಲಿ ಇವರ ಪಾತ್ರವೇನು? (ಕಾರ್ಯಕ್ರಮವಾರು ಸಂಪೂರ್ಣ ಮಾಹಿತಿ ನೀಡುವುದು)</td>
<td>ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 770 ಗ್ರಾಪಂಅ 2019 ದಿನಾಂಕ: 19.05.2021 ರನ್ವಯ ಈ ಕೆಳಗಿನ ಅಧಿಕಾರಿಗಳು ಜೀವವೈವಿಧ್ಯ ನಿರ್ವಹಣಾ ಸಮಿತಿಯ ಮೇಲುಸ್ತುವಾರಿಯನ್ನು ವಹಿಸಿರುತ್ತಾರೆ<br>
<table>
<tr><th>ಜೀವವೈವಿಧ್ಯ ನಿರ್ವಹಣಾ ಸಮಿತಿಯ ಹೆಸರು</th><th>ಅಧಿಕಾರಿ ಹೆಸರು</th></tr>
<tr><td>ಗ್ರಾಮ ಪಂಚಾಯಿತಿ</td><td>ಪಂಚಾಯಿತಿ ಅಭಿವೃದ್ಧಿ ಅಧಿಕಾರಿ</td></tr>
<tr><td>ತಾಲ್ಲೂಕು ಪಂಚಾಯಿತಿ</td><td>ತಾಲ್ಲೂಕು ಕಾರ್ಯನಿರ್ವಹಣಾಧಿಕಾರಿಗಳು</td></tr>
<tr><td>ಜಿಲ್ಲಾ ಪಂಚಾಯಿತಿ</td><td>ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು</td></tr>
</table>
<br>ಮೇಲೆ ಹೆಸರಿಸಲಾದ ಅಧಿಕಾರಿಗಳು ಜೀವವೈವಿಧ್ಯ ನಿರ್ವಹಣಾ ಸಮಿತಿಯ ಕಾರ್ಯಚಟುವಟಿಕೆ, ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆ, ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ತರಬೇತಿ ಕಾರ್ಯಗಾರ ಹಾಗೂ ಅಂತರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆಯ ಆಚರಣೆ ಸೇರಿದಂತೆ ಹಲವಾರು ಕಾರ್ಯಕ್ರಮಗಳ ಉಸ್ತುವಾರಿ ನೋಡಿಕೊಳ್ಳುತ್ತಾರೆ.</td>
</tr>
</table>

**ಕಡತ ಸಂಖ್ಯೆ:** ಅಪಜೀ 31 ಇಎನ್‌ವಿ 2023

(ಆನಂದ್ ಸಿಂಗ್)
ಜೀವಿಪರಿಸ್ಥಿತಿ ಮತ್ತು ಪರಿಸರ ಹಾಗೂ
ಪ್ರವಾಸೋದ್ಯಮ ಸಚಿವರು